ದಿ: 20-11-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ.ಟಿ., ವಕೀಲರಿಂದ ಆರೋಪಿತರ ಪರವಾಗಿ**:

6. ಆರೋಪಿತರು ನನ್ನ ತಮ್ಮನ ಮಕ್ಕಳು. ನಮಗೆ ಮತ್ತು ಆರೋಪಿತರಿಗೆ ಜಮೀನಿನ ವಿಚಾರವಾಗಿ 30 ವರ್ಷಗಳಿಂದ ವೈಮನಸ್ಸು ಇದೆ. ಆ ಜಮೀನನ್ನು ಈಗ ಆರೋಪಿತರೇ ಮಾಡಿಕೊಂಡು ಬರುತ್ತಿದ್ದಾರೆ. ನನಗೆ ಓದಲು ಬರೆಯಲು ಬರುವುದಿಲ್ಲ. ದೂರನ್ನು ನಾನೇ ಪೊಲೀಸರ ಮುಖಾಂತರ ಬರೆಸಿದ್ದೇನೆ. ನಾನು ದೂರನ್ನು ಹೇಳಿ ಬರೆಸಿಲ್ಲ ಅಂದರೆ ಸುಳ್ಳು. 07 ವರ್ಷಗಳ ಹಿಂದೆ ಘಟನೆ ನಡೆದಾಗ ಮಧ್ಯಾಹ್ನ 3.00 ಗಂಟೆಗೆ ನಾನು ಜಮೀನಿನಲ್ಲಿ ಇದ್ದೆ. ಆರೋಪಿತರು ಬಂದು ನನಗೆ ಹೊಡೆದರು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 03 ಜನ ಆರೋಪಿತರು ಸೇರಿ ನನ್ನನ್ನು ಜಬ್ಬಿದರು. ಆ ಸಮಯದಲ್ಲಿ ಅಕ್ಕಪಕ್ಕದ ಜಮೀನಿನಲ್ಲಿ ಜನರು ಯಾರೂ ಇರಲಿಲ್ಲ. ನಾನು ಹೇಳುವಂತಹ ಘಟನೆ ಆ ದಿನ ನಡೆದಿಲ್ಲ ಅಂದರೆ ಸರಿಯಲ್ಲ. ನನ್ನ ಜಮೀನಿನ ಮೇಲಿನ ಸರ್ವೇ ನಂಬರ 56 ಕೆಳಗಿನ ಸರ್ವೇ ನಂಬರ 58 ಇರುತ್ತದೆ.

7. ನನ್ನ ಮಗ ಸ್ಥಳಕ್ಕೆ ಬಂದ ನಂತರ ಆರೋಪಿತರು ನನ್ನನ್ನು ಚರಂಡಿಗೆ ತಳ್ಳಿದರು, ಆಗ ಗಾಯ ಆಯಿತಾ ಅಂದರೆ ನನಗೆ ಗಾಯ ಏನೂ ಆಗಿಲ್ಲ ನಾನು ಚರಂಡಿಯಲ್ಲಿ ಬಿದ್ದು ಎದ್ದು ಬಂದೆ, ಎಡ ಮೊಣಕಾಲಿಗೆ ಪೆಟ್ಟಾಗಿತ್ತು. ಮೊಣಕಾಲಿಗೆ ಪೆಟ್ಟಾದ ಬಗ್ಗೆ ನಾನು ದೂರಿನಲ್ಲಿ ಬರೆಸಿಲ್ಲ. ನನಗೆ ಆರೋಪಿತರು ಜಬ್ಬಿದಾಗ 06 ಜನರು ಇದ್ದರು ಅಂದರೆ 1 ರಿಂದ 4 ನೇ ಆರೋಪಿತರು, ಕಾಮಾಕ್ಷಿ ಮತ್ತು ಮಹೇಶರವರು ಇದ್ದರು. ಅವರನ್ನು ಹೊರತುಪಡಿಸಿ ಭರಮಪ್ಪ, ಬಸಮ್ಮ, ಮಂಜಪ್ಪ, ರಂಗಪ್ಪ, ಸುರೇಶಪ್ಪ ಮತ್ತು ನನ್ನ ಅಳಿಯ ಬಂದಿದ್ದರು. ಅಳಿಯನ ಹೆಸರು ನೆನಪಿಲ್ಲ.

8. ನಮ್ಮ ಮನೆಯ ಸುತ್ತಮುತ್ತಲೂ ಇತರೆ ಮನೆಗಳಿವೆ. ಗಲಾಟೆ ಆದಾಗ ಜನರು ಸೇರಿದ್ದರು, ಎಷ್ಟು ಜನ ಅಂತ ನಿಖರವಾಗಿ ಹೇಳಲು ಬರುವುದಿಲ್ಲ. ಮನೆಗೆ ಮಗ ಬಂದಾಗ ನಾನು

ಮನೆಯ ಒಳಗೆ ಇದ್ದೆ. ಆರೋಪಿತರು ನನ್ನ ಮಗನಿಗೆ ಹೊಡೆದಾಗ ನಾನು ಜನಗಳ ಮಧ್ಯೆ ಇದ್ದೆ. ಮಗನಿಗೆ ಆರೋಪಿತರು ಹೊಡೆದಾಗ ನಾನು 04-05 ಅಡಿ ಅಂತರದಲ್ಲಿದೆ. ಸಂಜೆ ಆದಾಗ ನನಗೆ ಕಣ್ಣು ಕಾಣುವುದಿಲ್ಲ ಅಂದರೆ ಸುಳ್ಳು. ಘಟನೆ ನಡೆದಾಗ ನಾನು ಸ್ಥಳದಲ್ಲಿ ಇರಲೇ ಇಲ್ಲ ಅಂದರೆ ಸುಳ್ಳು. ನನ್ನ ಮಗನ ಮಂಜಪ್ಪ. ತುಂಬಾ ಜನರಿದ್ದು ಮಂಜಪ್ಪರವರನ್ನು ದೂಡಾಡಿದ್ದರಿಂದ ಗಾಯ ಆಗಿದೆ ಅಂದರೆ ಸರಿಯಲ್ಲ. ನನ್ನ ಮಗನಿಗೆ ಗಲಾಟೆ ಆದಾಗ ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ ಅಂತ ಬರೆಸಿದ್ದೇನೆ ಅಂದರೆ ನಿಜ. ಮೊದಲಿಗೆ ನನ್ನ ಮಗನನ್ನು ಹೊನ್ನಾಳಿಯ ಆಸ್ಪತ್ರೆಗೆ ಆ್ಯಂಬೂಲೆನ್ಸ್ ನಲ್ಲಿ ಕರೆದುಕೊಂಡು ಹೋದರು. ಅಲ್ಲಿಂದ ಶಿವಮೊಗ್ಗಕ್ಕೆ ಕರೆದುಕೊಂಡು ಹೋದರು.

ನಮ್ಮ ಮತ್ತು ಆರೋಪಿತರ ನಡುವೆ ಸುಮಾರು ಸಲ ಪಂಚಾಯಿತಿಗೆ ಮಾಡಿದ್ದಾರೆ. ಸಾಕ್ಷಿದಾರರು ಹೇಳುತ್ತಾರೆ ಪಂಚಾಯಿತಿಗೆಗೆ ಆರೋಪಿತರು ಒಪ್ಪಿಲ್ಲ. ಆರೋಪಿತರು ನನ್ನ ಮಗನ ಮೇಲೆ ಯಾವುದೇ ರೀತಿ ಹಲ್ಲೆ ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿತರ ಮೇಲೆ ದ್ವೇಷ ಇಟ್ಟುಕೊಂಡು ಈ ಸುಳ್ಳು ದೂರು ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಈ ದಿನ ನನ್ನ ಜೊತೆ ನನ್ನ ಮಗ ನ್ಯಾಯಾಲಯಕ್ಕೆ ಬಂದಿದ್ದಾನೆ.

9. ನಾನು ಹೇಳಿದ ರೀತಿಯಲ್ಲಿ ಪೊಲೀಸರು ಮಹಜರ ಮಾಡಿಲ್ಲ ಅಂದರೆ ಸರಿಯಲ್ಲ. ಮಹಜರ ಬಗ್ಗೆ ನನಗೆ ಏನೂ ಗೊತ್ತಿಲ್ಲ ಅಂದರೆ ಸರಿಯಲ್ಲ. ಒಂದು ಮಹಜರ ಹೊಲದಲ್ಲಿ ಮತ್ತು ಇನ್ನೊಂದು ಮಹಜರನ್ನು ಮನೆಯಲ್ಲಿ ಮಾಡಿದ್ದಾರೆ. ಆ ಮಹಜರಗೆ ಚಾಸಾ-2, 3, ರಂಗಪ್ಪ, ರಮೇಶ ಮತ್ತು ಇತರರು ಮಾಡಿರುತ್ತಾರೆ. ಸ್ಥಳದಲ್ಲಿ ಮಹಜರ ಮಾಡಿಲ್ಲ, ಮೇಲೆ ಹೇಳಿದ ಮಹಜರ ಸಾಕ್ಷಿದಾರರು ನನ್ನ ಸಂಬಂಧಿಕರಿದ್ದು, ನಾನು ಪೊಲೀಸ್ ಠಾಣೆಯಲ್ಲಿ ತಯಾರಿಸಿದ ಮಹಜರಗೆ ಸಹಿ ಮಾಡಿದ್ದೇನೆ ಅಂದರೆ ಈ ಎಲ್ಲಾ ಸೂಚನೆಗಳು ಸುಳ್ಳು ಇರುತ್ತವೆ. ದೂರು ಕೊಟ್ಟ ನಂತರ ಪೊಲೀಸರು 11.30 ಗಂಟೆಗೆ ಬಂದರು. ಪೊಲೀಸರು ಅರ್ಧ ಗಂಟೆ ಅಲ್ಲೇ ಇದ್ದು ಬರೆದುಕೊಂಡರು. 03 ಅಥವಾ 04 ಜನ ಪೊಲೀಸರು

ಅಲ್ಲಿಗೆ ಬಂದಿದ್ದರು. ನಾನು ಹೇಳಿದ ರೀತಿಯಲ್ಲಿ ಪೊಲೀಸರು ಯಾವುದೇ ಸ್ಥಳ ಮಹಜರನ್ನು ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.